ಚಿತ್ರಪಟ ಕಥನ

# ಆಲೆಮನೆಯಲ್ಲಿ ಸಿಹಿ ಆಲೆಗಳು

ಆಲೆಮನೆಯಲ್ಲಿ ಕಬ್ಬು ಬೆಲ್ಲವಾಗುವುದನ್ನು ನೋಡುತ್ತ ನೋಡುತ್ತ ಒದ್ದೆ ಬೆಲ್ಲ ಮೆಲ್ಲುವ ಸುಖವೇ ಒಂದು ಅನೂಹ್ಯ ಧ್ಯಾನ.

■ ಪ್ರಸಾದ ಶೆಣೈ ಆರ್.ಕೆ.

ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಪುಟ್ಟ ಹಳ್ಳಿ ಹಾರೇಗೊಪ್ಪದಲ್ಲಿ ಸಂಜೆ ಸೂರ್ಯ ಸ್ವಲ್ಪ ಸ್ವಲ್ಪವೇ ಕೆಂಪಾಗಿದ್ದ. ಸಾಯಂಕಾಲದ ಮಂದ ಮಾರುತ ಸಣ್ಣಗೆ ಬೀಸುತ್ತಿತ್ತು. ಆ ಗಾಳಿಯ ಗಂಧದಲ್ಲಿ ಯಾವ ಹೂವಿನ ಘಮವೂ ಇರಲಿಲ್ಲ, ಆದರೆ ಮೂಗನ್ನು ಹಿತವಾಗಿ ಅರಳಿಸಿ, ಜಿಹ್ವಾರಸವನ್ನು ಭೋರ್ಗರೆಸುವ ಅಮಲ ಘಮಲಿತ್ತು. ನಾಲಗೆಯಂತೂ ಆ ಘಮಲು ಹುಟ್ಟಿಸುವ ವಸ್ತುವನ್ನು ಕಲ್ಪಿಸಿಕೊಂಡೇ ಸುಖಿಸಿ ಒಳಗೊಳಗೇ ನಲಿಯುತ್ತಿತ್ತು.

ಆಹಾ ಅದು ಬೆಲ್ಲದ ಅಮಲು, ಆಗ ತಾನೇ ಕುದಿಯೇರಿ ತಯಾರಾಗುತ್ತಿದ್ದ ತಾಜಾ ಬೆಲ್ಲದ ಚುಂಬಕ ಘಮಲು. ಸುರಿಯುತ್ತಲೇ ಇರುವ ಕಬ್ಬಿನ ಹಾಲು, ಬಿಸಿ ಬಿಸಿ ಬೆಲ್ಲ, ಅದರ ಕೆಂಬಣ್ಣ, ಅದರ ಮಾಯಾ ಮೋಹಕತನ ಎಲ್ಲವೂ ಎದೆಯೊಳಗೆ ಒಂದು ಕಾಲ್ಪನಿಕ ಚಿತ್ರವಾಗುವುದಕ್ಕಿಂತ ಮೊದಲೇ ನಮ್ಮ ಕಣ್ಣೆದುರು ಬಿಮ್ಮನೆ ನಿಂತುಬಿಟ್ಟಿತು ಸಿಹಿಯ ಸಗ್ಗ ಆಲೆಮನೆ.

ಅಡಿಕೆ ಮರದ ಚಪ್ಪರದ ಕೆಳಗೆ ಬೃಹತ್ ಗಾತ್ರದ ಕೊಪ್ಪರಿಗೆಯಲ್ಲಿ ಬೆಲ್ಲ ಬೇಯುತ್ತಿತ್ತು. ಇನ್ನೊಂದು ಚೌಕಾಕಾರದ ಕೊಪ್ಪರಿಗೆಯಲ್ಲಿ ಅದಾಗಲೇ ಇಳಿಸಿದ ಬೆಲ್ಲವನ್ನು ಉದ್ದಗಿನ ಸೌಟುಗಳಿಂದ ಅತ್ತಿತ್ತ ಆಡಿಸಲಾಗುತ್ತಿತ್ತು. ಹಾಗೆ ಆಡಿಸಿದಾಗಲೆಲ್ಲಾ ಒಮ್ಮೆ ಅರಿಶಿಣ ಬಣ್ಣದಲ್ಲಿ, ಮತ್ತೊಮ್ಮೆ ತಿಳಿ ಕೆಂಪು ಬಣ್ಣದಲ್ಲಿ ರಂಗೇಳುತ್ತಿತ್ತು ಬೆಲ್ಲ. ಸಂಜೆ ಸೂರ್ಯನ ಕಿರಣಗಳು ಬೆಲ್ಲದ ಮೇಲೆ ಬಿದ್ದು ತಿಳಿಗೆಂಪಿನ ಕೆನ್ನೆಯ ಸುಂದರಿಯ ಗಲ್ಲ ನಾಚಿಕೆಯಿಂದ ಕೆಂಪೇರಿದಂತೆ ಲಕ ಲಕ ಎಂದಿತು ಬಿಸಿಬಿಸಿ ಬೆಲ್ಲ.

ಇನ್ನೊಂದು ಕಡೆ ಕುದಿಯೇಳುತ್ತಿದ್ದ ಕಬ್ಬಿನ ಹಾಲನ್ನು ಬಣ್ಣ ಬದಲಾಗಿ, ಹದವಾಗಿ ಪಾಕ ತುಸು ಗಟ್ಟಿಗೊಳ್ಳುವವರೆಗೂ ಒಂದೇ ಸಮನೆ ಆಡಿಸಲಾಗುತ್ತಿತ್ತು. ಆ ಒಲೆಯ ಹಬೆ ಎದ್ದು ಮಾಡಿನ ಸಂದಿನಿಂದ ಇಣುಕುತ್ತಿದ್ದ ಬಿಸಿಕೋಲುಗಳಲ್ಲಿ ಕುಣಿದು ಕುಪ್ಪಳಿಸಿದಾಗ ಆಹಾ ಆಲೆಮನೆಗೊಂದು ಅಲೌಕಿಕ ಸೌಂದರ್ಯ ಒದಗುತ್ತಿತ್ತು. ಆ ಪರಿಮಳದ ಹಬೆ ನಮ್ಮೊಳಗಿಳಿದು ಯಾವುದೋ ಹೊಸ ಉನ್ಮತ್ತತೆಯ ಉತ್ತುಂಗದಲ್ಲಿ ಕಳೆದುಹೋದಂತಹ ವಿನೂತನ ಭಾವ ಆವರಿಸದೇ ಇರಲಿಲ್ಲ.

'ತಗೊಳ್ಳಿ ಬಿಸಿಬಿಸಿ ಬೆಲ್ಲ' ಎಂದು ಪುಟ್ಟ ಬಾಳೆ ಎಲೆಯ ಮೇಲೆ ಬಿಸಿಬಿಸಿ ಬೆಲ್ಲ ಹಾಕಿ ಕೊಟ್ಟಾಗಲಂತೂ ಎಲೆಯ ಮೇಲೆ ಹದವಾಗಿ ಅರಳಿ ಬಿದ್ದ ಬೆಲ್ಲದ ಚೆಂದವನ್ನೂ, ನವಿರೇಳಿಸುವ ಅದರ ಬಣ್ಣವನ್ನು ನೋಡಿ ಮೋಹಿತರಾಗದೇ ಇರಲು ಹೇಗೆ ಸಾಧ್ಯ? ಇನ್ನು ಬಿಸಿ ಬೆಲ್ಲವನ್ನು ಹಾಗೇ ಬಾಯಿಗಿಟ್ಟಾಗ ಆ ಸಿಹಿ ಬಾಯ್ತುಂಬಾ ಹರಡಿ, ಬಾಯಿ ಸಿಹಿಯ ಸಮುದ್ರವಾಗಿ ಭೋರ್ಗರೆಯುವಾಗ ಆಗುವ ಆನಂದಕ್ಕೆ ಬೇರೆ ಯಾವ ಹೋಲಿಕೆ ಮಾಡುವುದಪ್ಪ? ಆಲೆಮನೆಯಲ್ಲಿ ಕಬ್ಬು ಬೆಲ್ಲವಾಗುವುದನ್ನು ನೋಡುತ್ತ ನೋಡುತ್ತ ಒದ್ದೆ ಬೆಲ್ಲ ಮೆಲ್ಲುವ ಸುಖವೇ ಒಂದು ಅನೂಹ್ಯ ಧ್ಯಾನ.

ಬೆಲ್ಲವನ್ನು ಸಾಲು ಸಾಲಾಗಿರಿಸಿದ್ದ ಡಬ್ಬಕ್ಕೆ ತುಂಬಿಸಿ, ಬೆಲ್ಲ ಖಾಲಿಯಾಗುತ್ತಲೇ, ಮತ್ತೊಂದೆಡೆ ಕಬ್ಬಿನ ಯಂತ್ರಕ್ಕೆ ಕಬ್ಬು ಪೇರಿಸಿ ಕಬ್ಬಿನ ಹಾಲು ತಯಾರಿಸುವ ಕೆಲಸ ಶುರುವಾಗಿತ್ತು. ಐದಾರು ಯುವಕರು ಒಂದಷ್ಟೂ ಬಿಡುವಿಲ್ಲದೇ ಆಲೆಮನೆಯ ಕೆಲಸಗಳಲ್ಲಿ ಕಳೆದುಹೋಗಿದ್ದರು.

ಆಲೆಮಲೆಯ ಮುಖ್ಯಸ್ಥ ಸಚಿನ್ ಹಾರೇಕೊಪ್ಪ, ಕಬ್ಬು ಅರೆಯುವುದರಲ್ಲಿ ನಿರತರಾದರು. ಕಬ್ಬನ್ನು ಯಂತ್ರ ಹಿಂಡಿದಾಗ ಅಲ್ಲೇ ಇದ್ದ ಚೌಕಾಕಾರದ ಕಟ್ಟೆಯೊಳಗೆ ಕಬ್ಬಿನ ಹಾಲು ಮಿನಿ ಜೋಗದಂತೆ ಚಿಮ್ಮುತ್ತಿತ್ತು. ಹಾಗೆ ಹಾಲು ಸುರಿಯುವಾಗ ಸುತ್ತಲೂ ಕಬ್ಬಿನ ಹಾಲಿನ ಮಳೆಗೆರೆದಂತೆ, ಮೊದಲ ಮಳೆಗೆ ಮೂಡುವ ಮಣ್ಣಿನ ಪರಿಮಳದಂತೆ, ಕಬ್ಬಿನ ಹಾಲಿನ ಪರಿಮಳ ಗಾಳಿಯಲ್ಲಿ ತೇಲಿ ಸುತ್ತಲಿನ ಮನೆ ಮಂದಿಗಳನ್ನು ಮಕ್ಕಳು ಮರಿಗಳನ್ನು ಆಹ್ವಾನಿಸಿತು. ಗ್ಲಾಸು, ಬಾಟಲಿ, ಪಾತ್ರೆಗಳೆಲ್ಲಾ ಬಂದವು. ಕೆಲವೇ ಕ್ಷಣಗಳಲ್ಲಿ ತುಂಬಿಕೊಂಡವು. ಒಂದು ಲೋಟ ಕಬ್ಬಿನ ಹಾಲು ಬಾಯಿಗಿಳಿಸಿಕೊಂಡಾಗ ತನುಮನದೊಳಗೆ ನವ ಜೀವೋಲ್ಲಾಸ ಮೂಡಿತು.

'ಈ ವರ್ಷ ಕಬ್ಬು ಬೆಳೆದವರೇ ಕಡಿಮೆ, ಹಾಗಾಗಿ ಬೆಲ್ಲದ ರೇಟೂ ಜಾಸ್ತಿಯಾಗಿದೆ. ಊರ ಮಂದಿಗೆ, ನಮ್ಮ ಸಂಬಂಧಿಕರಿಗೆಲ್ಲ ಬೆಲ್ಲ ಕೊಟ್ಟು ಖಾಲಿ





